ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 90-93
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸಮಾಜ ಪರಿವರ್ತನೆಯಲ್ಲಿ ಸಂಕಲಗೆರೆ ಬುದ್ಧ ವಿಹಾರದ ಪಾತ್ರ : ಒಂದು ವಿಶ್ಲೇಷಣೆ

**ಅರುಣ್ ಕುಮಾರ್ ಡಿ.ಎ**
ಸಂಶೋಧನಾ ವಿಧ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

***Abstract:***
*ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಸಂಕಲಗೆರೆ ಬುದ್ಧವಿಹಾರವು ಹಲವು ಬೌದ್ಧ ಅನುಯಾಯಿಗಳನ್ನ ಹುಟ್ಟುಹಾಕಿದೆ. ಬುದ್ಧ ತೋರಿದ ಮಾರ್ಗದಲ್ಲಿ, ಬಾಬಾಸಾಹೇಬ್ ಡಾ.ಬಿ.ಆರ್ ಅಂಬೇಡ್ಕರ್ ಅರಿವಿಗಚ್ಚಿದ ನಡೆಜಾಡಿನಲ್ಲಿ ಹಲವು ಸಮಾನ ಮನಸ್ಕ ಅಂಬೇಡ್ಕರ್‌ವಾದಿ ಬೌದ್ಧಾಸಕ್ತರು ಇಲ್ಲಿ ಸಂಘಟಿತರಾಗಿದ್ದಾರೆ. ಬೌದ್ಧ ಧರ್ಮದ ನಾಲ್ಕು ಆರ್ಯಸತ್ಯಗಳು, ಪಂಚಶೀಲಗಳು, ಅಷ್ಟಾಂಗಮಾರ್ಗಗಳನ್ನು ಅನುಸರಿಸುತ್ತಾ, ಲೋಕಕಲ್ಯಾಣಕ್ಕಾಗಿ ಪಾದಯಾತ್ರೆ ಸಂಘಟಿಸಿ ಚನ್ನಪಟ್ಟಣದ ಪ್ರತಿ ಊರಿಗೂ ಬೌದ್ಧ ದಮ್ಮದ ತತ್ವ ಆದರ್ಶಗಳನ್ನು ಮುಟ್ಟಿಸುವ ಕಾಯಕವು ಈ ವಿಹಾರದಿಂದ ಆಗುತ್ತಿದೆ. ಮುಂದುವರೆದು ಸರಳ ಮತ್ತು ಅನುಸರಣೆ ಯೋಗ್ಯ ತಾತ್ವಿಕತೆಯನ್ನು ಜನಮಾನಸದಲ್ಲಿ ಬಿತ್ತುವ ಕಾಯಕದಲ್ಲಿ ತೊಡಗಿಕೊಂಡಿದೆ. ದ್ವೇಷವನ್ನು ದ್ವೇಷದಿಂದ ಶಮನ ಮಾಡಲು ಸಾದ್ಯವಿಲ್ಲ, ಮೈತ್ರಿಯಿಂದ ಶಮನ ಮಾಡಲು ಸಾದ್ಯ ಎಂಬ ಬುದ್ಧನ ವ್ಯಾಖ್ಯಾನಕ್ಕನುಗುಣವಾಗಿ ಸಮಕಾಲಿನ ಬದುಕು ಬವಣೆಗಳು ತೀವ್ರವಾದ ಸಂಘರ್ಷಯುಕ್ತ ಪೈಪೋಟಿಯಲ್ಲಿ ಸಾಗುತ್ತಿರುವುದಕ್ಕೂ ತನ್ನ ಚಿಂತನಶೀಲ ವಿವೇಕವಂತ ನಡೆ ಜಾಡುಗಳಿಗೂ ಬುದ್ಧನ ಮಾರ್ಗದಲ್ಲಿ ಉತ್ತರವಿದೆ.*

**Keywords:** *ಬೌದ್ಧ ಧರ್ಮ, ಬುದ್ಧವಿಹಾರ, ಸಮಾಜ ಪರಿವರ್ತನೆ, ಸಂಕಲಗೆರೆ.*

## ಪೀಠಿಕೆ

ಪ್ರಸ್ತುತ ಸಮಾಜ ಆಸೆ, ಆಮಿಷ, ಮೋಸ, ವಂಚನೆ ಹಗೆಯ ಜಾಡುವಿಡಿದು, ದರ್ಪ ದಾಸ್ಯ ತುಂಬಿದ ಕಡು ಕೆಟ್ಟದಾದ ನಡಾವಳಿಗಳಲ್ಲಿ ಮುಂದಡಿ ಇಡುತ್ತಿದೆ. ಇದಕ್ಕೆ ವಿಮುಖವಾಗಿ ಶಾಂತಿ, ಸಹನೆ, ಮೈತ್ರಿ, ಪ್ರೀತಿಯ ದ್ಯೋತಕಗಳನ್ನು ಜನಮಾನಸದಲ್ಲಿ ಬಿತ್ತುವ ಸಲುವಾಗಿ ಸಂಕಲಗೆರೆ ಬುದ್ಧ ವಿಹಾರ "ವಿಶ್ವಶಾಂತಿಗಾಗಿ ಪಂಚಶೀಲ ಪಾದಯಾತ್ರೆ" ಯನ್ನು ಬೌದ್ಧ ಬಿಕ್ಕು ಸಂಘದ ನೇತೃತ್ವದಲ್ಲಿ ಚನ್ನಪಟ್ಟಣ ತಾಲೂಕಿನಾದ್ಯಂತ ಪಾದಯಾತ್ರೆ ನಡೆಸುವ ಮುಖಾಂತರ ಬುದ್ಧ ಗುರುವಿನ ವಿಚಾರಗಳನ್ನು ಮನೆ ಮನೆಗಳಿಗೆ ತಲುಪಿಸುವ ಮಹೋನ್ನತ ಕಾಯಕವನ್ನು ಮಾಡಿದೆ.

ಈ ಲೇಖನವನ್ನು ಸಿದ್ದಪಡಿಸಲು ಕ್ಷೇತ್ರಕಾರ್ಯ ಮತ್ತು ವ್ಯಕ್ತಿ ಸಂದರ್ಶನಗಳ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಮತ್ತು ಮಾಧ್ಯಮಿಕ ಆಕರಗಳನ್ನು ಬಳಸಲಾಗಿದೆ. ಈ ಮೂಲಕ ಮಾಹಿತಿಯನ್ನು ಸಂಗ್ರಹಿಸಿ, ಸಮಕಾಲೀನ ಕರ್ನಾಟಕದಲ್ಲಿ ಬೌದ್ಧ ಧರ್ಮದ ಪ್ರಭಾವ, ಮಹತ್ವವನ್ನು ತಿಳಿದುಕೊಳ್ಳುವ ಉದ್ದೇಶದಿಂದ ಲೇಖನ ಸಿದ್ದಪಡಿಸಲಾಗಿದೆ.

***Please cite this article as:*** ಅರುಣ್ ಕುಮಾರ್, ಡಿ.ಎ. (2026). ಸಮಾಜ ಪರಿವರ್ತನೆಯಲ್ಲಿ ಸಂಕಲಗೆರೆ ಬುದ್ಧ ವಿಹಾರದ ಪಾತ್ರ: ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(6), 90–93

**ಸಂಕಲಗೆರೆ ಬೌದ್ಧ ವಿಹಾರದ ಕಾರ್ಯ ಚಟುವಟಿಕೆಗಳು**

- ಗೃಹ ಪ್ರವೇಶದಂತಹ ಕಾರ್ಯಗಳನ್ನು ಬೌದ್ಧ ವಿಧಿವಿಧಾನಗಳ ಮೂಲಕ ಆಚರಿಸಲು ಪ್ರೇರೇಪಿಸುವುದು.
- ಪ್ರತಿ ತಿಂಗಳ ಹುಣ್ಣಿಮೆ ದಿನ ಬೌದ್ಧ ಬಿಕ್ಕುಗಳಿಂದ ಪ್ರವಚನ ಕಾರ್ಯಕ್ರಮಗಳನ್ನು ನಡೆಸುವುದು.
- ಬೌದ್ಧ ಧರ್ಮದ ಪಂಚಶೀಲಗಳ ಮಹತ್ವವನ್ನು ಸಾರುವುದು.
- ಮಗುವಿನ ನಾಮಕರಣ ಸಂಪ್ರದಾಯಗಳಲ್ಲಿ ಬುದ್ಧನ ಜೀವನಕ್ಕೆ ಸಂಬಂಧಿಸಿದ ಹೆಸರುಗಳನ್ನು ಇಡಲು ತಿಳಿವಳಿಕೆ ಮೂಡಿಸುವುದು.
- ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಶ್ರಮಿಸುತ್ತಿರುವುದು.
- ಅಂತರ್ಜಾತಿಯ ವಿವಾಹಗಳಿಗೆ ಪ್ರೋತ್ಸಾಹಿಸಿ, ಬುದ್ಧಾನುಶಾಸನದಲ್ಲಿ ವಿವಾಹವಾಗಲು ಅರಿವು ಮೂಡಿಸುವುದು.
- ಸಮಸಮಾಜದ ಆಶಯಗಳನ್ನು ಜನರಲ್ಲಿ ಬಿತ್ತುವುದು.
- ಸಾಮರಸ್ಯ–ಸಹಬಾಳ್ವೆಯ ತತ್ವಗಳನ್ನು ಜೀವನದಲ್ಲಿ ಪಾಲಿಸಲು ಪ್ರೇರೇಪಿಸುವುದು.
- ಜ್ಯಾತ್ಯತೀತವಾದ ಮನೋಭಾವನೆಯನ್ನು ಬೆಳೆಸುವುದು.
- ಸಮಾಜದಲ್ಲಿ ಮಹಿಳಾ ಶೋಷಣೆಯ ವಿರುದ್ಧ ಅರಿವು ಮೂಡಿಸುವುದು.
- ಡಾ.ಬಿ.ಆರ್.ಅಂಬೇಡ್ಕರ್‌ರವರ ಕನಸಿನ, ಪ್ರಬುದ್ಧ ಭಾರತ ನಿರ್ಮಾಣದ ಬಗ್ಗೆ ಅರಿವು ಮೂಡಿಸುವುದು.

**ಸಂಕಲಗೆರೆ ಬುದ್ಧ ವಿಹಾರದ ಪಾದಯಾತ್ರೆ**

ದಿನಾಂಕ 11–08–2022 ರಂದು ಚನ್ನಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ 9 ಜನ ಬಂತೇಜಿಗಳು, 32 ಜನ ಉಪಾಸಕರುಗಳಿಂದ ಪಾದಯಾತ್ರೆ ಪ್ರಾರಂಭವಾಯಿತು. ಈ ಪಾದಯಾತ್ರೆ ಸತತವಾಗಿ 26 ದಿನಗಳ ಕಾಲ 90ಕ್ಕೂ ಹೆಚ್ಚು ಹಳ್ಳಿಗಳನ್ನು ಸಂಚರಿಸಿ 350 ಕಿಲೋ ಮೀಟರ್ ಕ್ರಮಿಸಿರುವುದು ಒಂದು ಐತಿಹಾಸಿಕ ದಾಖಲೆಯಾಗಿದೆ. ಪ್ರತಿನಿತ್ಯ ಬೆಳಗ್ಗೆ 9 ಘಂಟೆಗೆ ಪಂಚಶೀಲ ಪಾದಯಾತ್ರೆ ಪ್ರಾರಂಭವಾದರೆ ರಾತ್ರಿ ಒಂಭತ್ತು ಗಂಟೆಗೆ ಮುಕ್ತಾಯವಾಗುತ್ತಿತ್ತು, ಶನಿವಾರ ವಿಶ್ರಾಂತಿಯ ದಿನವಾಗಿದ್ದು ಆ ದಿನ ಉಪಶನ ಮತ್ತು ಮೈತ್ರಿ ಧ್ಯಾನ ಮಾಡಲಾಗುತ್ತಿತ್ತು.[1]

ಈ ಪಾದಯಾತ್ರೆಯ ನೇತೃತ್ವವು ಚಾಮರಾಜನಗರ ಜಿಲ್ಲೆ ನಳಂದ ವಿಶ್ವವಿದ್ಯಾಲಯದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಮಹಾಕರುಣಾ ಬುದ್ಧ ವಿಹಾರದ ಅಧ್ಯಕ್ಷರು ಆದಂತಹ ಭೋದಿದತ್ತ ಬಂತೇಜಿಯವರು ರಕ್ತದಾನ ಮಾಡುವುದರ ಮುಖಾಂತರ ಚಾಲನೆ ನೀಡಿದರು. ಶ್ರೀಲಂಕಾ ದೇಶದಿಂದ ತಂದಿದ್ದ ಬುದ್ಧನ ಅಸ್ತಿಯನ್ನು ಮೆರವಣಿಗೆ ಮಾಡುವುದರ ಮೂಲಕ ಬುದ್ಧಗುರುವಿನ ದಮ್ಮವನ್ನು ಜನಸಾಮಾನ್ಯರಿಗೆ ತಲುಪಿಸಿ ಪ್ರಬುದ್ಧ ಭಾರತ ನಿರ್ಮಾಣ ಮಾಡುವ ಸಂಕಲ್ಪದೊಂದಿಗೆ ಈ ಯಾತ್ರೆ ಮುನ್ನಡೆಯಿತು.[2]

ಬೌದ್ಧ ಧಮ್ಮದ ಪಂಚಶೀಲಗಳಾದ ಪ್ರಾಣಿ ಹಿಂಸೆ ಮಾಡದಿರುವುದು, ಕಳ್ಳತನ ಮಾಡದಿರುವುದು, ವ್ಯಭಿಚಾರ ಮಾಡದಿರುವುದು, ಮೋಸ ಮಾಡದಿರುವುದು, ದೂಮಪಾನ ಮದ್ಯಪಾನ ಮಾಡದಿರುವುದು.[3] ಈ 5 ಶೀಲಗಳು ಪ್ರತಿಯೊರ್ವರ ದೇಹ ಮನಸ್ಸುಗಳನ್ನ ಶುದ್ದವಾಗಿಟ್ಟುಕೊಂಡು ಯಾವ ಕೇಡನ್ನು ಬಯಸದ, ಅನುಸರಿಸದೆ ಪ್ರಬುದ್ಧ ಬದುಕನ್ನು ಸವೆಸುವ ಅಂಶಗಳ ಬಗ್ಗೆ ಯಾತ್ರೆಯ ಉದ್ದಕ್ಕೂ ತಿಳಿಸಲಾಯಿತು. ಈ ಪಾದಯಾತ್ರೆಯಲ್ಲಿ

ಜನರು ಉತ್ಸಾಹಭರಿತದಿಂದ ಪಾಲ್ಗೊಂಡು ಪಾದಯಾತ್ರೆಗೆ ಮೆರಗನ್ನು ತುಂಬಿದರು.

ಜನರು ಯಾವುದೇ ಭಯ, ಆತಂಕ, ಆಡಂಭರ ಇಲ್ಲದೆ ಸರಳವಾಗಿ ಎಲ್ಲರಿಗೂ ಅರ್ಥ ಆಗುವ ರೀತಿಯಲ್ಲಿ ಬುದ್ಧನ ತತ್ವಗಳನ್ನು ಹೇಳುತಿದ್ದರು. ಹಾಗೆಯೇ ಧ್ಯಾನ ಮತ್ತು ಪ್ರಾರ್ಥನೆಯ ಮಹತ್ವವನ್ನು ತಿಳಿಸುತ್ತಾ ಜಗತ್ತಿನ ಸಮಸ್ತ ಜೀವರಾಶಿಗಳು ಸುಖವಾಗಿ, ನೆಮ್ಮದಿಯಾಗಿ ಜೀವನ ನಡೆಸುವ ಆದ್ಯ ಮಾರ್ಗಗಳನ್ನು ತಿಳಿದುಕೊಂಡು ಎಲ್ಲಾ ನಾಗರಿಕರು ಸಂತೋಷವಾಗಿ ಮುನ್ನಡೆದಿದ್ದರು.

ಜಾತಿ, ಮತ-ಪಂಥಗಳ ಬೇಧವಿಲ್ಲದೆ ಚಿಕ್ಕ ಮಕ್ಕಳಿಂದಿಡಿದು ವಯೋವೃದ್ಧರ ವರೆಗೂ ಚನ್ನಪಟ್ಟಣದ ಮಹಾಜನತೆ ಈ ಪಾದಯಾತ್ರೆಗೆ ಕೈಜೋಡಿಸಿದ್ದಾರೆ. ಗ್ರಾಮಗಳಿಗೆ ಬೇಟಿ ನೀಡಿದಾಗ ಬೀದಿಗಳನ್ನು ಸ್ವಚ್ಛಗೊಳಿಸಿ, ರಂಗೋಲಿ, ಹೂಗಳಿಂದ ಶೃಂಗರಿಸಿರುವುದು ಕಂಡುಬಂದಿತು. ದೀಪ ಬೆಳಗಿಸಿ ತಮಟೆ, ನಗಾರಿಗಳನ್ನು ನುಡಿಸಿ ಸ್ವಾಗತ ಕೋರಿದರು. ಈ ಮೂಲಕ ಹಳ್ಳಿಗಳಲ್ಲಿ ಹಬ್ಬದ ವಾತಾವರಣ ಉಂಟು ಮಾಡಿದ್ದರು.[4]

ಬಂತೇಜಿಗಳಿಗೆ ಹಾಗೂ ಉಪಾಸಕರಿಗೆ ಧಮ್ಮದಾನ ಮಾಡುವುದರ ಮುಖೇನ ಸತ್ಕರಿಸುತ್ತಿದ್ದರು. ದವಸ-ಧಾನ್ಯ, ತೆಂಗಿನ ಕಾಯಿ, ಹಾಗೂ ಕಾಣಿಕೆಗಳನ್ನು ಶಕ್ತಾನಾಸಾರವಾಗಿ ನೀಡುತ್ತಿದ್ದರು. ಬಂತೇಜಿಗಳ ಪ್ರವಚನ ಹಾಗೂ ಬುದ್ಧರ ಕತೆಗಳನ್ನು ಕೇಳಿ ಬೌದ್ಧ ದಮ್ಮದ ತಿರುಳನ್ನು ಅರಿಯುತ್ತಿದ್ದರು.

**ಪಾದಯಾತ್ರೆಯ ಪ್ರಮುಖ ಘಟನೆಗಳು**

- ಬುದ್ಧನ ವಿಚಾರಗಳನ್ನು ತಿಳಿದುಕೊಂಡಂತಹ ಒಂದಷ್ಟು ಜನ ದೂಮಪಾನ, ಮದ್ಯಪಾನ ಬಿಡುವುದಾಗಿ ಪ್ರಮಾಣ ಮಾಡಿದರು.
- ಹುಲವಾಡಿ ಗ್ರಾಮದಿಂದ ಮುಕುಂದ ಗ್ರಾಮಕ್ಕೆ ಪಾದಯಾತ್ರೆ ಹೋಗುವಾಗ 5 ವರ್ಷದ ಬಾಲಕ ಬರಿಗಾಲಿನಲ್ಲಿ 1.5 ಕಿ.ಮೀ ಪಾದಯಾತ್ರೆ ಮಾಡಿ ಅಚ್ಚರಿ ಮೂಡಿಸಿದ್ದನು.
- ಗುಡಿಸಲಲ್ಲಿ ವಾಸಮಾಡುವ ಅಜ್ಜಿಯೊಬ್ಬರು, ಕಷ್ಟಪಟ್ಟು ಕೂಡಿಟ್ಟ ಹಣವನ್ನು ಬುದ್ಧರ ಕಾರ್ಯಕ್ಕೆ ದಾನ ಮಾಡಿದರು.
- ಹಸುಗೂಸಿನ ತಾಯಿಯೊಬ್ಬರು ತನ್ನ ಮಗುವಿಗೆ ಬಂತೇಜಿಯವರಿಂದ ಸಿದ್ದಾರ್ಥ ಗೌತಮ ಎಂದು ನಾಮಕರಣ ಮಾಡಿಸಿದ್ದು, ಪಾದಯಾತ್ರೆಯ ಔಚಿತ್ಯವನ್ನು ಹೆಚ್ಚಿಸಿತು.
- ಯಾತ್ರೆಯು ಪೂಜ್ಯ ಜ್ಞಾನಪ್ರಕಾಶ್ ಸ್ವಾಮಿಜಿ ರವರು ಮತ್ತು ಭಾರತೀಯ ಬೌದ್ಧ ಸಮಾಜ ಸಹಭಾಗಿತ್ವದಲ್ಲಿ ಯಶಸ್ವಿಯಾಗಿ ನಡೆಯಿತು.[5]

**ಉಪಸಂಹಾರ**

ಸಂಕಲಗೆರೆ ಬುದ್ಧ ವಿಹಾರವು ರಾಮನಗರ ಜಿಲ್ಲೆಯಲ್ಲಿರುವ ಪ್ರಮುಖ ಬೌದ್ಧ ವಿಹಾರವಾಗಿದೆ. ಸಮಸಮಾಜದ ಆಶಯಗಳನ್ನು ಮೂಡಿಸಲು ಹಾಗೂ ಸಮಾಜದ ಸ್ವಾಸ್ಥವನ್ನು ಕಾಪಾಡಲು ಅನೇಕ ಕಾರ್ಯಚಟುವಟಿಕೆಗಳನ್ನು ಮಾಡುತ್ತಾ ಬಂದಿದೆ. ಇದರ ಪರಿಣಾಮ ಸಮಾಜದಲ್ಲಿ ಬಹುಜನರು ಪ್ರಭಾವಿತರಾಗಿ ದುಶ್ಚಟಗಳನ್ನು ಮತ್ತು ಅನೈತಿಕ ಚಟುವಟಿಕೆಗಳನ್ನು ತೊರೆಯುವಂತಹ ನಿರ್ಧಾರಗಳನ್ನು ಕೈಗೊಳ್ಳುತ್ತಿರುವುದು ಪ್ರಬುದ್ಧ ಬೆಳವಣಿಗೆ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು**


- ಚಂದ್ರಯ್ಯ, ಬಿ.ನಂ. (2001). *ಬುದ್ಧ ಧಮ್ಮ ವಾಙ್ಮಯ.* ಕಮಲ ಪ್ರಕಾಶನ.
- ಚಿಕ್ಕ ಚನ್ನಯ್ಯ. (2010). *ರಾಮನಗರ ಜಿಲ್ಲೆಯ ಧಾರ್ಮಿಕ ಪರಂಪರೆ.* ರಾಮನಗರ ಜಿಲ್ಲಾ ಸಾಹಿತ್ಯ ಪರಿಷತ್.
- ನಂದನ, ವೈ.ಬಿ. *ಬುದ್ಧ ಚರಿತೆ* ಮತ್ತು *ಧಮ್ಮಸಾರ.* ಬುದ್ಧ ವಚನ ಟ್ರಸ್ಟ್,

- ರಾಜಶೇಖರ, ಸಿ.ಎಚ್. (2010). *ಬುದ್ಧ.* ಸೌಮ್ಯಶ್ರೀ ಪ್ರಕಾಶನ.
- ಶಂಕರಪ್ಪ, ಕೆ.ಎಂ. *ಬುದ್ಧ ಬರಲಿ ನಮ್ಮ ಊರಿಗೆ.* ಕರ್ನಾಟಕ ದಲಿತ ಸಂಘರ್ಷ ಸಮಿತಿ.


**ಕೊನೆ ಟಿಪ್ಪಣಿಗಳು**

---

[1] ಸಂದರ್ಶನ– ದಿನಾಂಕ 24–06–2024 ಶ್ರೀ ಆಯುಷ್ಮಾನ್ ಕೃಷ್ಣಪ್ಪ, ಸಂಕಲಗೆರೆ ಬೌದ್ಧವಿಹಾರದ ಕಾರ್ಯದರ್ಶಿ, ಸಂಕಲಗೆರೆ ಗ್ರಾಮ ಚನ್ನಪಟ್ಟಣ ತಾಲೂಕು.

[2] ಸಂದರ್ಶನ– ದಿನಾಂಕ 10–08–2024 ಶ್ರೀ ನಾರಾಯಣಸ್ವಾಮಿ, ಸಂಕಲಗೆರೆ ಗ್ರಾಮದ ನಿವಾಸಿ, ಚನ್ನಪಟ್ಟಣ ತಾಲೂಕು.

[3] ಸಂದರ್ಶನ– ವೈ ಬಿ ನಂದನ, ಬೌದ್ದ ನಿತ್ಯಾಚರಣೆಗಳು, ಬುದ್ದ ವಚನ ಟ್ರಸ್ಟ್, 2020.

[4] ಸಂದರ್ಶನ– ದಿನಾಂಕ 24–06–2024 ಶೀ ಧನಂಜಯ, ಸಂಕಲಗೆರೆ ಗ್ರಾಮದ ನಿವಾಸಿ. ಚನ್ನಪಟ್ಟಣ ತಾಲೂಕು

[5] ಸಂದರ್ಶನ– ದಿನಾಂಕ 10–08–2024 ಶ್ರೀ ಅಪ್ಪಗೆರೆ ಪ್ರದೀಪ, ಅಪ್ಪಗೆರೆ ಗ್ರಾಮದ ನಿವಾಸಿ, ಚನ್ನಪಟ್ಟಣ ತಾಲೂಕು.